ನೋಡಲು ಪುಟ್ಟ ತೆಂಗಿನಕಾಯಿಯಂತೆ ಕಾಣುವ ತಾಳೆಹಣ್ಣುಗಳು ಮರದಲ್ಲಿ ಗುಂಪು ಗುಂಪಾಗಿ ಕಂಡು ಬರುತ್ತವೆ. ಮರದಿಂದ ಗೊಂಚಲು ಕೆಳಗಿಳಿಸಿದಾಗ ಒಂದೊಂದು ಹಣ್ಣನ್ನು ಹರಿತವಾದ ಪುಟ್ಟ ಮಚ್ಚಿನಿಂದ ಕಪ್ಪುಸಿಪ್ಪೆ ಸುಲಿದಾಗ ಒಳಗೆ ಹೃದಯದಂತಹ ಮೂರು ತೊಳೆಗಳ ಒಳಗಡೆ ಸ್ವಲ್ಪ ಸಿಹಿಯಾದ ನೀರು ಸಿಗುತ್ತದೆ. ಹಣ್ಣಿನ ಒಳ ತಿರುಳನ್ನು ತೆಗೆದಾಗ ಲಿಚಿಯಂತಹ ಬಿಳಿ ಜೆಲ್ಲಿ ಇರುತ್ತದೆ. ಇದರ ರುಚಿ ಎಳನೀರ ಗಂಜಿನಂತೆಯೇ ಸ್ವಲ್ಪ ಸಿಹಿ ಇರುತ್ತದೆ.

ಪಪ್ಪಾಯಿ ಜ್ಯೂಸ್ ಇಲ್ಲವೇ ಮಾವಿನಹಣ್ಣಿನ ಜ್ಯೂಸ್ ಜೊತೆಗೆ ತಾಳೆಹಣ್ಣನ್ನು ಐಸ್ ಕ್ಯೂಬ್‌ನಂತೆ ತುಂಡರಿಸಿ ಡ್ರೈಫ್ರೂಟ್ ಮಿಶ್ರಣದಿಂದ ಅಲಂಕರಿಸಿ ಸವಿಯಬಹುದು. ಎಳನೀರಿನೊಂದಿಗೆ ತಾಳೆಹಣ್ಣಿನ್ನು ಐಸ್ ಕ್ಯೂಬ್‌ನಂತೆ ತುಂಡರಿಸಿ ಎಳನೀರಿನ ಗಂಜಿಯೊಂದಿಗೆ ಸೇವಿಸಬಹುದು. ಮಾವಿನಹಣ್ಣು ಇಲ್ಲವೇ ಪಪ್ಪಾಯಿ ಹಣ್ಣು, ತಾಳೆಹಣ್ಣಿನ ಸಲಾಡ್ ಜೊತೆಗೆ ಐಸ್‌ಕ್ರೀಮ್, ಡ್ರೈಫ್ರೂಟ್ ಮಿಶ್ರಣ ಬಾಯಿಗೆ ರುಚಿ ನೀಡುತ್ತದೆ.

**–ಅನುರಾಧ ಟಿ., ದಾವಣಗೆರೆ**





## ಹಾವಲ್ಲ ಇದು ಹೂವು

ಹೂವುಗಳ ರಾಣಿ ಗುಲಾಬಿ. ಒಂದು ನೂರಕ್ಕೂ ಹೆಚ್ಚಿನ ಜಾತಿ ಹಾಗೂ ವರ್ಣಗಳಿಂದ ಕಂಗೊಳಿಸುವ ಗುಲಾಬಿ ಕುಬ್ಜಾಕಾರದಿಂದ ಮೊದಲ್ಗೊಂಡು ಇಪ್ಪತ್ತು ಮೀಟರ್ ಎತ್ತರದವರೆಗೂ ಬೆಳೆಯಬಲ್ಲ ಸಸ್ಯ. ಗಿಡ ಗುಲಾಬಿ, ಮರ ಗುಲಾಬಿ, ಬಳ್ಳಿ ಗುಲಾಬಿ ಹೀಗೆ ವೈವಿಧ್ಯದಿಂದ ಮನಸೂರೆಗೊಳ್ಳುವ ಎಲ್ಲಾ ಬಗೆಯ ಗುಲಾಬಿ ಗಿಡದ ಕಾಂಡಗಳು ದುಂಡಾಗಿರುತ್ತವೆ. ವಿಶ್ವದಾದ್ಯಂತ ವಿವಿಧ ಭಾಗಗಳಿಂದ ಬರುವ ಗುಲಾಬಿ ಮಾದರಿಯ ಜಾತಿಗಳು ಸುಲಭವಾಗಿ ಸಂಕರಗೊಂಡು ವೈವಿಧ್ಯಮಯ ಗಿಡಗಳಾಗಿ ಹೊರಹೊಮ್ಮಿದರೂ, ಕಾಂಡ ಮತ್ತು ಎಲೆಗಳ ರಚನೆಯಲ್ಲಿ ವ್ಯತ್ಯಾಸವಿರುವುದಿಲ್ಲ.

ಆದರೆ ನಮ್ಮನೆ ಅಂಗಳದಲ್ಲಿನ 'ನಾಟಿ ಬಿಳಿ ಬಣ್ಣದ ಗುಲಾಬಿ' ಗಿಡದ ಕಾಂಡವೊಂದು ಹಸಿರು ಹಾವಿನಂತೆ ಒಡಮೂಡಿರುವುದು ಆಶ್ಚರ್ಯ ಮೂಡಿಸಿತು. ದಪ್ಪನೆಯ ಚಪ್ಪಟೆಯಾಕಾರದಿ ಕಾಂಡ ಬೆಳೆದಿದ್ದು, ಹಸಿರು ಹಾವಿನ ತಲೆಯಂದದಿ ಕಂಗೊಳಿಸುವಂತೆ, ತುದಿಯಲ್ಲಿ ಹತ್ತಾರು ಮೊಗ್ಗುಗಳು ಮೂಡಿ ಹಸಿರು ಹಾವೇ ಹೂವಾದಂತೆ, ಹೂವಿನ ಗಿಡವೇ ಹಾವಾದಂತೆ ಕಂಡುಬರುತ್ತಿದೆ.

**–ಎಸ್.ಎನ್. ಚಂದ್ರಕಲಾ ಕೊಪ್ಪ**

## ಹಲವು ಹೆಸರುಗಳ ಚಿತ್ರದುರ್ಗ

ಚಿತ್ರದುರ್ಗವು ಐತಿಹಾಸಿಕ ಮತ್ತು ಚಾರಿತ್ರಿಕವಾಗಿ ಹಿನ್ನೆಲೆ ಹೊಂದಿರುವ ಗಂಡು ಮೆಟ್ಟಿದ ನಾಡು. ಇಲ್ಲಿನ ಏಳು ಸುತ್ತಿನ ಕೋಟೆ, ಕರ್ನಾಟಕದಲ್ಲಿ ಬಹು ದೊಡ್ಡ ಕೋಟೆಯಾಗಿದೆ. ದಕ್ಷಿಣ ಭಾರತದಲ್ಲಿ ತಮಿಳುನಾಡಿನ ಜಿಂಜಿ ಕೋಟೆ ಮೊದಲ ಸ್ಥಾನ ಪಡೆದರೆ, ಚಿತ್ರದುರ್ಗದ ಕೋಟೆ 2ನೇ ಸ್ಥಾನ ಪಡೆದಿದೆ. ಅಭೇದ್ಯವಾಗಿ ಇರುವ ಈ ಕೋಟೆಯಲ್ಲಿ, ಎಸ್. ಪುಟ್ಟಣ್ಣ ಕಣಗಾಲ್ ಅವರು 1972ರಲ್ಲಿ 'ನಾಗರಹಾವು' ಚಿತ್ರವನ್ನು ಚಿತ್ರೀಕರಣ ಮಾಡಿದ ನಂತರ ಇನ್ನಷ್ಟು ಖ್ಯಾತಿಗೊಂಡಿತು.

ಇಂತಹ ಹಿನ್ನೆಲೆಯ ಚಿತ್ರದುರ್ಗವು ಹಲವಾರು ಹೆಸರುಗಳಿಂದ ಕರೆಸಿಕೊಳ್ಳುವುದರಲ್ಲಿಯೂ ಮುಂದಿದೆ. ಬಹುಶಃ ಇಷ್ಟೊಂದು ಹೆಸರು ಹೊಂದಿರುವ ಊರು ಬೇರೆ ಯಾವುದೂ ಇಲ್ಲ ಎನ್ನಲೇಬಹುದು. ಶಾತವಾಹನರ ಕಾಲದಲ್ಲಿ ಸೂಳ್‌ಗಲ್ಲು, ಕದಂಬರ ಕಾಲದಲ್ಲಿ ಚಂದ್ರವಳ್ಳಿ, ರಾಮಾಯಣ ಕಾಲದಲ್ಲಿ ಚಿಲ್ಮ್ಲಾದ್ರಿ, ದ್ವಾಪರ ಯುಗದಲ್ಲಿ ಹಿಡಿಂಬಪಟ್ಟಣ, ಹೊಯ್ಸಳರ ಕಾಲದಲ್ಲಿ ಪೆರುಮಾಳೆಪುರ, ವಿಜಯನಗರದ ಕಾಲದಲ್ಲಿ ಚಿಮ್ಮತ್ತ ನೂರು (ಬೆಮ್ಮತ್ತ ನೂರು) ಎಂದು ಕರೆಸಿಕೊಳ್ಳುತ್ತಿದ್ದ ಚಿತ್ರದುರ್ಗವು ಪಾಳೇಗಾರರಿಗೆ ಚಿತ್ರಕಲ್ಲು ದುರ್ಗ, ಛತ್ರಕಲ್ಲು ದುರ್ಗ ಎಂದಾಗಿತ್ತು. ಹೈದರ್‌ಟಿಪ್ಪು ಫರ್ರಕ್ಕಬಾದ್, ಬ್ರಿಟಿಷರು ಚಿತ್ತಲ್ ಡ್ರಗ್ ಅಂತ ಕರೆಯುತ್ತಿದ್ದರು.

ಆದರೆ ಪಾಳೇಗಾರರು ಕರೆದ 'ಚಿತ್ರಕಲ್ಲು ದುರ್ಗ' ಈಗ 'ಚಿತ್ರದುರ್ಗ' ಆಗಿದೆ. ಹೀಗೆ ಚಿತ್ರದುರ್ಗ ಆಗಲು ಕೋಟೆಯಲ್ಲಿ ಇರುವ ಪ್ರಕೃತಿದತ್ತ ಬಂಡೆಗಳು ಕಾರಣ ಆಗಿವೆ. ಕೋಟೆಯ ಗಣಪತಿ ದೇಗುಲದ ಹಿಂಬದಿ ಅನೇಕ ಚಿತ್ರವಿಚಿತ್ರ ಬಂಡೆಗಳು ಇವೆ. ಆನೆ ಬಂಡೆ, ಮೊಸಳೆ ಬಂಡೆ, ಕಪ್ಪೆ, ಮೀನು, ಇಲಿ, ಹಡಗು, ಆಮೆ ಇನ್ನಿತರೆ ಬಂಡೆಗಳು ಚಿತ್ರದುರ್ಗವೆಂದು ಕರೆಯಲು ಈಗಲೂ, ಜೀವಂತಸಾಕ್ಷಿಯಾಗಿ ನೋಡುಗರ ಮನಕ್ಕೆ ಸಂತಸ ನೀಡುತ್ತಿವೆ.

**–ಬಿ. ಮೊಹಿದ್ದೀನ್ ಖಾನ್, ಚಿತ್ರದುರ್ಗ**

